ಕಾಯಾಕ ಆಕ್ಕೇತೆನು? ಹೆಂಡ್ತಿ ಅಂತ ಪ್ರೀತಿ ಅಂಬುದು ಇದ್ರ ಹಿಂಗೆಲ್ಲಾ ಮಾಡ್ತಿರಲಿಲ್ಲ. ಇದು ಕಾಳವ್ವನ ವಾದ. ಇದಕ್ಕೆಲ್ಲಾ ಕಾರಣ ಅಸಲಿಗೆ ಕಾಳವ್ವನೇ ಅಂತ ಅತ್ತಿ ರಾಮವ್ವನ ವಾದ. ಕಾಳವ್ವ ಪಾಪ ಏನ್ ಮಾಡ್ಯಾಳು? ಗಂಡ್ಸಾದೊನು ಹೆಂಡ್ತಿ ಮಾತು ಅದೂ ಕುಡ್ದ ನಿಶೆದಾಗ ಕೇಳಾಕ ಆಕ್ಕೇತೆನು? ಶಕ್ಯಿಲ್ಲ ಅನ್ನೊರಿ. ಹಿಂಗಾಗಿ ಅವ ಮನಿಗೆ ಬರಲ್ಲ, ಅವನ ತಾಯಿ, ಸೊಸಿಗೆ ಬೈಯ್ಯೊದ್ ಬಿಡಂಗಿಲ್ಲ. ಹಿಂಗ ನಡೆದಿತ್ತು ಅವರ ಸಂಸಾರದ ಕತಿ.

ಊರಾಗ ಯಾವ ದೇವರದು ನಡಿತದ ಆ ದೇವರ ಹೆಸರ ಮಕ್ಕಳಿಗೆ ಇಟ್ಟರ್ತಾರ, ಅದು ನಮ್ ಊರ್ ಕಡೆ ಇಡ್ತಾರ. ರಾಮವ್ವಗೂ ಹೆಸರು ಹಂಗ ಬಂದಿತ್ತು. ಕಾಳವ್ವಗೂ ಅವರೂರಿನ ದೇವರ ಹೆಸರ ಇಟ್ಟದ್ರು.

ಕಾಳವ್ವ ಮದುವ್ಯಾಗಿ ರಾಮವ್ವನ ಮನಿ ಸೊಸಿಯಾಗಿ ಬಂದು ಹತ್ತು ವರ್ಷ ಆಗಿತ್ತು. ಕಾಳವ್ವ ಬಸಿರಾಗ್ದೆ ಇರೂದು ರಾಮವ್ವಗ ಸಿಟ್ ಬರ್ಸಿತ್ತು. ಅದ್ಕ ಬಂಜಿ, ಗೊಡ್ಡೆಮ್ಮಿ ಅಂತಾಕಿ. ನಿನ್ನ ಹೊಟ್ಯಾಗ ಒಂದು ಹುಳನೂ ಹುಟ್ಟಲ್ಲ ಅಂತೆಲ್ಲಾ ಬೈತಿದ್ಲು. ಈಕೀಗ ಬೈಸ್ಕೊಂಡು, ಹೊಡೆದಾಟದ ಜೀವನ ಸಾಕಾಗಿ ಹೋಗಿತ್ತು. ಆಕೀಗು ಮಕ್ಕಳು ಅಂದ್ರ ಆಸೆನೆ. ಆದ್ರ, ಆಸೆ ಪಟ್ರ ಮಕ್ಕಳು ಆಗಿ ಬಿಡ್ತಾವಾ? ಯಾರಿಗಾದ್ರೂ ಮಕ್ಕಳು ಅಂದ್ರ ಪ್ರಾಣನೇ. ಆದ್ರಾ ಈಕೀ ಏನ್ ಮಾಡ್ಬೇಕು? ಈಕಿದೆನ್ ತಪ್ಪೈತಿ? ಗಂಡ ಅನ್ನೊನು ಬಿಡಾಡಿ ದನದಂಗ, ಹೆಂಡತಿ ಬ್ಯಾಡ, ಮನಿ ಬ್ಯಾಡ, ಮಕ್ಳು ಬ್ಯಾಡ ಅನ್ನೊ ಗಿರಾಕಿ. ಪರಿಸ್ಥಿತಿ ಹಿಂಗಿರುವಾಗ ಕಾಳವ್ವನ ಬದುಕು ಚೆನ್ನಾಗಿರೊಕ ಹೆಂಗ್ ಸಾಧ್ಯ? ಸುಮ್ನೆ ಎಲ್ರೂ ಕಾಳವ್ವನ ಬೈತಿದ್ರ? ಹಿಂಗ ಅನ್ನಿಸಿಕ್ಕೊಂಡು, ಅನ್ನಿಸಿಕ್ಕೊಂಡು, ರೋಸಿ ಹೋಗಿದ್ದ ಕಾಳವ್ವ ಯಾರ್ ಗುಂಟನು, ಜಾಸ್ತಿ ಮಾತಾಡ್ತಿರ್ಲಿಲ್ಲ. ಯಾಕ್ ಬೇಕು ಈ ಜನರ ಉಸಾಬರಿ, ಮಾತಾಡಿಸಿದ್ರ ಬೈತಾರ, ಕೊಂಕು ಮಾತು ಕೇಳೊದು, ಅದರ ಬದಲು ಸುಮ್ಕಿರೊದೆ ವಾಸಿ ಅಂತೇಳಿ ಅನ್ನಿಸಿ, ಸುಮ್ನೆ ಹೊಲ ಆತು ತಾನ್ ಆತು, ತನ್ ಕೆಂಪಿ ಆಕಳಾತು. ಮಾತೆಲ್ಲಾ ಅಕಿದು ಹೊಲದಲ್ಲಿನ ದನಗಳ ಜೊತೆ, ಹುಲ್ಲು ಕೊಯ್ಯೊತ ಹುಲ್ಲಿನ ನಗು ನೋಡಿ ತಾನೂ ನಗ್ತಿದ್ಲು. ಕಾಳವ್ವಗ ಊರಾಗಿಲ್ಲದಿರೊ ನೆಮ್ಮದಿ ಅಡವ್ಯಾಗ ಸಿಗ್ತಿತ್ತು. ಈಗೀಗ ಅತ್ತಿ ಜಗಳಾಡಿ ಎರಡೇಟು ಹೋಡೆದ್ರೂ, ಗಂಡ ನಿಶೆದಾಗ ಬಂದು ಬೈದ್ರೂ ಸುಮ್ಮನೆ ಆಕ್ಕಿದ್ಲು. ಜೀವನ ಹಿಂಗ ನದಿ ಇದ್ದಾಂಗ ನಾನು ದಡ ಮುಟ್ಟಬೇಕು. ಅಂದ್ರ ಎಂತ ಅಲಿ ಬಂದ್ರು, ಅದರ ಹೊಡೆತ ತಾಳ್ಕೊಬೇಕಾಗುತ್ತಾ ಅದ್ಕ ಆ ಅಲಿ ಗುಣ ಕಲಿಬೇಕು ಕಲ್ತಿನಿ ಅಂತಿದ್ಲು. ಕಾಳವ್ವ ಹಿಂಗಿರೋದು ನೋಡಿ ರಾಮವ್ವಗ ಹೊಟ್ಟೆ ಚುರ್ ಅಂತಿತ್ತು. ಆದ್ರ, ಇಕಿಗ ಮಕ್ಳು ಆಗೊವಲ್ದು, ನಮ್ ವಂಶ ಬೆಳ್ಯಾಕಬೇಕು. ಹತ್ತೂರಾಗ ಸಾವಕರ್ ಭೀಮಣ್ಣನ ಮನಿ ಅಂತ ಹೆಸರಾಗಿರೊ ಮನೆತನ. ಆ ಮನೆತನದ ಹೆಸರು ಉಳಿಸಾಕ ಒಂದು ಕೂಸು ಹುಟ್ಬೇಕಾಗಿತ್ತು. ಕೂಸ್ ಹುಟ್ಟೊದು ಸರಳ ಅಲ್ಲ ಅಂತ ಎಲ್ಲರಿಗೂ ಗೊತ್ತು. ಆದ್ರ, ಮನಿ, ಮನೆತನದ ಪ್ರಶ್ನೆ ಬಂದಾಗ ಬಲಿಯಾಗೊದೆ ಮನಿ ಸೊಸೆ.

ಕಾಳವ್ವನ ಮನಸ್ಸು ಆಸೆ ತುಂಬಿದ ಕಣಜ ಆಗೇತಿ. ತವರಮನಿ ಕಡೆ ಅಪ್ಪ ಅವ್ವ ತೀರಿಕೊಂಡಿದ್ರು, ಅಂತದ್ರಾಗ ಇವರೆಲ್ಲರ ಮಾತು, ಆಕಿಗೆ ಪ್ರಶ್ನೆಗಳು ಹುಟ್ಟಾಕ ಶುರುವಾದ್ವು. ನನಗೆ ಅಂತ ಯಾರ್ ಅದಾರ? ಯಾರಿಗೋಸ್ಕರ ಬದುಕಬೇಕು? ನನ್ನವರು ಅಂತ ಯಾರೂ ಇಲ್ಲ. ನನ್ನ ಅರ್ಥಮಾಡಿಕೊಳ್ಳೋರು ಯಾರೂ ಇಲ್ಲ. ಎಲ್ರೂ ನನ್ನ ಬೈಯ್ಯೊರೆ ಆಗಿ ಬಿಟ್ರು ಅಂತೇಳಿ ಹೊಲಕ್ಕೋಗೊ ದಾರ್‍ಯಾಗ ಸಿಹಿ ನೀರಿನ ಬಾವಿ ಐತಿ ಕರಿಯಪ್ಪಜ್ಜನಂದು. ಆ ಬಾವಿಯೊಳಗ ಹಣಿಕಿ ನೋಡಾಕಾತಿದ್ಲು. ಆದ್ರ ಸಿಹಿ ನೀರಿನ ಮೂಲದಾಗ ಬಿದ್ರಾ? ಜನಕ್ಕ ಕುಡಿಯಾಕ ನೀರು ಸಿಗಲ್ಲ ಅಂತೇಳಿ ವಾಪಸ್ ಆಗಿದ್ಲು. ಇದು ಅವಳು ಸಾಯಲು ಮಾಡಿದ ಮೊದಲ ಪ್ರಯತ್ನ, ಆದರ ಸುದ್ದಿ ಯಾರಿಗೂ ಗೊತ್ತಾಗಿರಲಿಲ್ಲ. ಮತ್ತೊಮ್ಮೆ ಬಸಪ್ಪಜ್ಜನ ಬಾವಿ ಹೆಂಗಿದ್ರು ಹಾಳ್ ಬಾವಿ, ಆ ಬಾವ್ಯಾಗ ಬಿದ್ರ ಬಸಪ್ಪಜ್ಜ ಊರ್ ಸೇರ್ತಾನು. ಸೊಸಿ ಮಗನ ಜೊತಿ ಆರಾಮಾಗಿ ಊರಾಗಿರ್ತಾನ. ನಾ ಸಾಯೊದ್ರಿಂದ ಎರಡು ಒಳ್ಳೆ ಕೆಲಸ ಮಾಡ್ದಾಂಗ ಆಕ್ಕೇತಿ ಅಂತೇಳಿ ಹೊಕ್ಕಾಳು. ಎಲ್ಲರನ್ನು ನೆನೆಸಿಕೊಂಡು ಅಳ್ತಾಳ. ಆಮ್ಯಾಕ ಇನ್ನೆನು ಬಿಳ್ಬೇಕು ಅಂತ ಹಿಂಗ ಬಗ್ಗೊಕೆ ಹೋಗಿರ್ತಾಳ, ಹಿಂದಿನಿಂದ ಲಬಲಬ ಹೊಯ್ಕೊಳೊ ಶಬ್ದ ಕೇಳ್ಸುತ್ತ. ಗಸಕ್ಕನ ಕಾಳವ್ವ ತಿರುಗಿ ನೋಡಿ ಗಾಬರಿ ಆಕ್ಕಾಳ. ಮುಖ ಕೊಟ್ಟು ಮಾತಾಡಾಕ ಅಗಲ್ಲ. ತಲಿ ತಗ್ಗಿಸ್ತಾಳ. 'ಅತ್ತಿ ನನ್ ಕ್ಷಮಿಸಿಬಿಡು. ನಾ ನಿನಗ ನೋವ ಕೊಟ್ಟನಿ. ಯಾರಿಗೂ ನನ್ನಿಂದ ಒಳ್ಳೇದಾಗಿಲ್ಲ, ಅತ್ತಿ ನಾ ಸಾಯ್ತಿನಿ ಬಿಟ್ಟಬಿಡು' ಅಂತೇಳಿ ಪಾಪ ಅಳಾಕ ಹತ್ತತಾಳ. 'ನೋಡ್ ಕಾಳವ್ವ, ನಿನ್ನ ನಾ ನೋಡದಾಗ ಸುಮ್ನ ಒರೆಸಿಕೊಳ್ಳಾಕ